

ಬೆಟ್ಟದ ಬುಡದಲ್ಲಿ ಖರ್ಜೂರ ಫಾರಂ


ಅರಬ್ಬರು ನಂಬಿದ್ದಾರೆ. 'ನಿಮಗಾಗಿ ದೇವರು ಗೊಂಚಲು ತುಂಬಿದ ಖರ್ಜೂರದ ಹಣ್ಣು ಮತ್ತು ರಸಭರಿತ ದ್ರಾಕ್ಷಿಬಳ್ಳಿಯನ್ನು ಕೊಟ್ಟಿರುವವನು' ಎಂಬ ಹೇಳಿಕೆಗಳು ಕುರಾನಿನಲ್ಲಿವೆ. ಸುಕ್ರಿ, ಖುದ್ರಿ, ಸಫ್ವಾ, ಅಜ್ವಾ – ಹೀಗೆ 16 ಖರ್ಜೂರದ ತಳಿಗಳಿವೆ.

ಕಪ್ಪಗೆ ಒಣದ್ರಾಕ್ಷಿಯಂತೆ ಮೈಯೆಲ್ಲ ಸುಕ್ಕಿನಿಂದ ಕೂಡಿರುವ ಮದೀನಾ ಸೀಮೆಯ ಅಜ್ವಾ ಖರ್ಜೂರವು ಪೈಗಂಬರ್ ಅವರಿಗೆ ಪ್ರಿಯವಾಗಿತ್ತೆಂದೂ ನಂಬಲಾಗಿದೆ. ತಮ್ಮನ್ನು ವಿರೋಧಿಸುತ್ತಿದ್ದ ಜನರಿದ್ದ ಮೆಕ್ಕಾ ಶಹರವನ್ನು ತೊರೆದು ಪೈಗಂಬರ್ ಅವರು, ಮದೀನಾವನ್ನು ತಮ್ಮ ವಾಸಕ್ಕೆ ಆಯ್ಕೆ ಮಾಡಿಕೊಂಡಿದ್ದಕ್ಕೂ, ಅಜ್ವಾ ಖರ್ಜೂರದ ಕೀರ್ತಿಗೂ ಸಂಬಂಧ ಕಲ್ಪಿತವಾಗಿದೆ. ಪೈಗಂಬರ್ ಅವರಾದರೂ ಜನರಿಗೆ 'ದ್ರಾಕ್ಷಿಬಳ್ಳಿ, ಖರ್ಜೂರದ ಮರ ಬೆಳೆಸಿರಿ. ಯಾರು ಮದೀನಾದ ಖರ್ಜೂರ ತಿನ್ನುವವರೊ ಅವರಿಗೆ ವಿಷವೂ ತಾಗುವುದಿಲ್ಲ' ಎಂದು ಹೇಳುತ್ತಿದ್ದರಂತೆ. ಪ್ರಾಚೀನ ಅರಬ್ ಸಮಾಜದಲ್ಲಿ, ಮನೆಯಲ್ಲಿ ತಿನ್ನಲು ಖರ್ಜೂರವಿಲ್ಲದವರು ನಿಜವಾಗಿ ಬಡತನದಲ್ಲಿದ್ದಾರೆ ಎಂದು ತಿಳಿಯಲಾಗುತ್ತಿತ್ತು. ಆಧುನಿಕ ಕಾಲದಲ್ಲಿ ಸೌದಿ ಅರೇಬಿಯಾದ ರಾಜಚಿಹ್ನೆಯಲ್ಲಿ ಎರಡು ಖಡ್ಗಗಳ ನಡುವೆ ಖರ್ಜೂರದ ಮರ ವಿರಾಜಮಾನವಾಗಿದೆ.

ನಾನು ಮೊಟ್ಟಮೊದಲು ಖರ್ಜೂರದ ಗಿಡಗಳನ್ನು ದರ್ಶನ ಮಾಡಿದ್ದು, ಈಜಿಪ್ಟಿನ ಸಿನಾಯ್ ಮರುಭೂಮಿಯಲ್ಲಿ. ಇಸ್ರೇಲಿನಿಂದ ಭೂಮಾರ್ಗವಾಗಿ ಈಜಿಪ್ಟಿನ ಗಡಿಯನ್ನು ದಾಟಿ, ಕೈರೊ ಶಹರಕ್ಕೆ ಹೋಗುವಾಗ ಸಿಗುವ ವಿಶಾಲ ಮರುಭೂಮಿಯಿದು. ಅಲ್ಲಿ ಬಸ್ಸನ್ನು ಓಯಸಿಸ್ ಇರುವಲ್ಲಿ ನಿಲ್ಲಿಸಲಾಗುತ್ತಿತ್ತು. ಅಲ್ಲಿ ಅಂತರ್ಜಲದಿಂದ ಉಕ್ಕುವ ಚಿಲುಮೆಗಳಿಂದ ಕೊಳಗಳು ನಿರ್ಮಾಣವಾಗಿದ್ದವು. ಅವುಗಳ ದಂಡೆಯಲ್ಲಿ ಖರ್ಜೂರದ ಮರಗಳು ಸೊಂಪಾಗಿ ಬೆಳೆದಿದ್ದವು. ಅವುಗಳ ಮುಡಿಯಲ್ಲಿ ಗೊಂಚಲುಗಳಾಗಿ ಹಣ್ಣು ಜಗ್ಗಿತ್ತು. ನೆಲದೊಳಗೆ ತನುವಿರುವ ಕಡೆಯಲ್ಲೆಲ್ಲ ಖರ್ಜೂರದ ತೋಟಗಳನ್ನು ಕಾಣಬಹುದಿತ್ತು. ಅಲ್ಲೇ ಸಮೀಪದಲ್ಲಿ ಜನವಸತಿ. ನೀರು, ಊರು, ಹಣ್ಣುಗಳ ಈ ತ್ರಿವಳಿ ಸಂಬಂಧ ವಿಶಿಷ್ಟವಾಗಿತ್ತು. ಇರಾಕಿನ ಜೀವನಾಡಿಗಳಂತೆ ಹರಿಯುವ ಯೂಪ್ರಟಿಸ್, ಟಿಗ್ರಿಸ್ ಹೊಳೆಗಳ ಆಸುಪಾಸು, ಕಡಲೋಪಾಯದಂತೆ ಹರಡಿರುವ ಖರ್ಜೂರದ ಬನಗಳನ್ನು ನಾವು ಕಂಡೆವು. ಪ್ಯಾಲೆಸ್ತೈನಿನಲ್ಲಿ ಜೋರ್ಡಾನ್ ಹೊಳೆತೀರದ್ದುದಕ್ಕೂ ಖರ್ಜೂರದ ಮರಗಳಿದ್ದವು. ಈ ಭಾಗದ ಅತಿ ಪ್ರಾಚೀನ ಪಟ್ಟಣವಾದ ಜೆರಿಕೊದಲ್ಲಿ ಮಾರಲಾಗುತ್ತಿದ್ದ ಖರ್ಜೂರವು ತೊಂಡೆಕಾಯಿಗಿಂತಲೂ ದಪ್ಪಗಿತ್ತು. ಇಸ್ರೇಲ್, ಮೃತಸಮುದ್ರದ ಆಸುಪಾಸು ಬರಡುಬೆಟ್ಟಗಳ ಬದಿಯಲ್ಲಿ ಲಕ್ಷಾಂತರ ಎಕರೆಯಲ್ಲಿ ಖರ್ಜೂರದ ಕೃಷಿ ಮಾಡಿತ್ತು. ಮರುಭೂಮಿಯಲ್ಲಿ ಜನ ಜೀವ ಹಿಡಿದುಕೊಂಡಿರುವುದೇ ಓಯಸಿಸ್ ಮತ್ತು ಖರ್ಜೂರಗಳಿಂದ. ಹೀಗಾಗಿಯೇ ಅತಿಥಿಸತ್ಕಾರದಲ್ಲಿ ನೀರು ಮತ್ತು ಖರ್ಜೂರ ಕೊಡುವುದು ಇಲ್ಲಿ ಸಾಮಾನ್ಯವಾಗಿದೆ.

ಮರುಭೂಮಿಯ ತಿರುಗಾಟ ಮಾಡುವವರಿಗೆ, ಖರ್ಜೂರದ ಮರವು ಕಠೋರವಾದ ಬಿಸಿಲಿನಲ್ಲಿ, ಸುಡುವ ಮರಳಿನಲ್ಲಿ, ಕಠೋರವಾದ ಬೋಳು ಬೆಟ್ಟಗಳ ಬದಿಯ ಕಣಿವೆಗಳಲ್ಲಿ, ಓಯಸಿಸ್ ಮತ್ತು ಹೊಳೆಗಳ ದಡಗಳಲ್ಲಿ ಗೊಮ್ಮಟನಂತೆ ಧೀಮಂತವಾಗಿ ನಿಂತಿರುವುದನ್ನು ನೋಡಬಹುದು. ಬೆಳೆಯುತ್ತಿರುವ ಊರುಗಳಾಚೆಯ ಸ್ಲಂಪ್ರದೇಶಗಳಲ್ಲಿ, ಪಾಳುಜಾಗಗಳಲ್ಲಿ ಕೂಡ ಅವು ಅಪಮಾನ ಭಾವವಿಲ್ಲದೆ ನಮ್ರತೆಯಿಂದ ನಿಂತಿವೆ. ಜಗತ್ತಿನ ಅತ್ಯಂತ ವಿಸ್ತಾರವಾದ ಕರ್ಬಲಾದ ಖಬರಸ್ಥಾನದಲ್ಲಿ ಇವು ಸಾವು ಬದುಕಿಗೆ ಪ್ರತ್ಯಕ್ಷದರ್ಶಿಗಳಾಗಿ ಬೆಳೆದಿದ್ದವು. ನೆಲದಲ್ಲಿ


ಖರ್ಜೂರದ ಕಟ್ಟಿಗೆಯಿಂದ ಕಟ್ಟಿದ ಹಳೆಯ ಮನೆಯ ಅವಶೇಷ


ಮರುಭೂಮಿಯಲ್ಲಿ ಓಯಸಿಸ್ ಬಳಿ ಖರ್ಜೂರ ಮರ (ಈಜಿಪ್ಟ್)